<u>ದಿಃ 10-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು : 1, 3, 4, 6 ಮತ್ತು 7 ನೇ ಆರೋಪಿತರ ಪರ ಶ್ರೀ. KDP. ವಕೀಲರಿಂದ:</u>**

ನರೇಗಾ ಕಾರ್ಯಕ್ರಮದಲ್ಲಿ ತಾಲೂಕ ಪಂಚಾಯತಿ ಅಧಿಕಾರಿಗಳು ಸಹ ಜವಾಬ್ದಾರಿ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅವಧಿಯಲ್ಲಿ ಯಾವುದೇ ಸಾಮಾಜಿಕ ಕಾಮಗಾರಿಗಳ ಲೆಕ್ಕ ಪರಿಶೋಧನೆ ಮಾಡಿಲ್ಲ. ವಿಶೇಷ ಸಾಮಾಜಿಕ ಲೆಕ್ಕ ಪರಿಶೋಧನೆ ನಾನು ಮಾಡಿಲ್ಲ ಎಂದರೆ ಸಾಕ್ಷಿ ಅದನ್ನು ಪಂಚಾಯತಿಯವರು ಮಾಡಬೇಕು ಎಂದು ನುಡಿಯುತ್ತಾರೆ. ಇಲಾಖಾ ಲೆಕ್ಕ ಪರಿಶೋಧನೆಯನ್ನು ಆಯಾ ಪಂಚಾಯತಿಯವರು ಮಾಡಿಸಿಕೊಳ್ಳಬೇಕಾಗುತ್ತದೆ. ಸಾಕ್ಷಿ ಮುಂದುವರೆದು ಒಂದು ವೇಳೆ ಗ್ರಾಮ ಪಂಚಾಯತಿಯವರು ಮಾಡಿಸದೇ ಇದ್ದಲ್ಲಿ ನಮ್ಮ ಗಮನಕ್ಕೆ ಬಂದರೆ ನಾವು ನೋಟಿಸು ಮೂಲಕ ಮಾಡಿಸಬೇಕು ಎಂದು ತಿಳಿಸುತ್ತೇವೆ. ಈ ಪ್ರಕರಣದಲ್ಲಿ ನಾನು ಗ್ರಾಮ ಪಂಚಾಯತಿಯವರಿಗೆ ನೋಟಿಸು ನೀಡಿಲ್ಲ. ನರೇಗಾ ಕಾಮಗಾರಿಗಳಲ್ಲಿ PDO, AEO, CS, DS ರವರು ಮಾತ್ರಾ ಸಹಿ ಮಾಡಲು ಅಧಿಕಾರ ಹೊಂದಿರರುತ್ತಾರೆ ಎಂದರೆ ಸರಿಯಲ್ಲ. ನನ್ನ ವರ್ಗಾವಣೆ ಆಗಿದರಿಂದ ನಾನು ಯಾವುದೇ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿಲ್ಲ. ಹಣ ವರ್ಗಾವಣೆಗೊಂಡ ವ್ಯಕ್ತಿಗಳೊಂದಿಗೆ GPS ಫೋಟೊ ತೆಗೆದಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಧಿಕಾರ ವ್ಯಾಪ್ತಿ ಬರುವುದಿಲ್ಲ ಎಂದು ನುಡಿಯುತ್ತಾರೆ.

ನಾನೇ ತಪ್ಪನ್ನು ಎಸಗಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಫಿರ್ಯಾದಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : 8 ನೇ ಆರೋಪಿ ಪರ ಶ್ರೀ. RHB. ವಕೀಲರಿಂದ:</u>**

8 ನೇ ಆರೋಪಿ ಗುತ್ತಿಗೆದಾರ ಎಂದರೆ ಸರಿ. ಗುತ್ತಿಗೆದಾರ ಕೆಲಸವು PDO ಮತ್ತು ಅಧ್ಯಕ್ಷರು ನೀಡಿದ ಕಾಮಗಾರಿಗಳ ಸಾಮಾಗ್ರಿಗಳನ್ನು ಒದಗಿಸುವುದು ಎಂದರೆ ಸರಿ. ಸಾಮಾಗ್ರಿಗಳನ್ನು ಒದಗಿಸಿದಂತೆ ಬಿಲ ಪಾವತಿ ಆಗುತ್ತದೆ ಎಂದರೆ ಸರಿ. ಗ್ರಾಮ ಪಂಚಾಯತಿ

ಮಲ್ಲಾಬಾದ ರಲ್ಲಿ ಎಷ್ಟು ಜನ ಗುತ್ತಿಗೆದಾರರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ದೂರು ನೀಡುವ ಸಮಯದಲ್ಲಿ 8 ನೇ ಆರೋಪಿ ವಿರುದ್ಧ ದೂರು ನೀಡಿಲ್ಲ ಎಂದರೆ ಸರಿ.

ನರೇಗಾ ಕಾಮಗಾರಿಗಳಲ್ಲಿ ಗುತ್ತಿಗೆದಾರರ ಜವಾಬ್ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. 8 ನೇ ಆರೋಪಿತನನ್ನು ರಾಜಕೀಯ ದುರುದ್ದೇಶದಿಂದ ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. 8 ನೇ ಆರೋಪಿತನಿಗೆ ಯಾವುದೇ ತಪ್ಪು ಮಾಡದೇ ಇದ್ದರೂ ಆತನ ವಿರುದ್ಧ ಸುಳ್ಳು ದೂರು ನೀಡಲಾಗಿದೆ ಎಂದರೆ ಸಾಕ್ಷಿ 2 ಕೋಟಿ 11 ಲಕ್ಷ ಹಣ 8 ನೇ ಆರೋಪಿತನ ಖಾತೆಗೆ ಜಮಾ ಆಗಿದೆ ಎಂದು ನುಡಿಯುತ್ತಾರೆ. 40 ಪ್ರತಿಶತ ಹಣದಲ್ಲಿ ಗುತ್ತಿಗೆದಾರರಿಗೆ ಬಿಲ ಪಾವತಿ ಆಗುತ್ತದೆ ಎಂದರೆ ಸಾಕ್ಷಿ ಆಯಾ ಕಾಮಗಾರಿಗೆ ತಕ್ಕಂತೆ ಆಗುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲಿ 8 ನೇ ಆರೋಪಿತನ ಖಾತೆಗೆ ಯಾವುದೆ ಹಣ ಜಮಾ ಆಗಿಲ್ಲ ಎಂದರೆ ಸರಿಯಲ್ಲ. ಈ ಯೋಜನೆ ಅಡಿಯಲ್ಲಿ ಸಾಕಷ್ಟು ಜನರು ಗುತ್ತಿಗೆದಾರರು ಇದ್ದರೂ ಸಹ 8 ನೇ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈ ಯೇಜನೆ ಬಹುಪಾಲು ಕಾಮಗಾರಿಗಳನ್ನು 8 ನೇ ಆರೋಪಿಗೆ ನೀಡಲಾಗಿದೆ ಎಂದು ನುಡಿಯುತ್ತಾರೆ. 8 ನೇ ಆರೋಪಿಗೆ ಬಹುಪಾಲು ಕಾಮಗಾರಿಗಳನ್ನು ನೀಡಲಾಗಿದೆ ಎಂದು ನುಡಿಯುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ